# ಬೆಂಗಳೂರು ಮುದ್ರಣಾಲಯ / ಕನ್ನಡದ ಆನ್‌ಲೈನ್ ಮತ್ತು ಮೊಬೈಲ್ ಕ್ಯಾಲೆಂಡರ್‌ಗಳ ಅನಾವರಣ

ಬೆಂಗಳೂರು : 2 ಜನವರಿ 2013 : ತನ್ನ ಪ್ರಸಿದ್ಧ ಕನ್ನಡ ಮತ್ತು ಇಂಗ್ಲಿಷ್ ಕ್ಯಾಲೆಂಡರ್‌ಗಳ ಆನ್‌ಲೈನ್ ಮತ್ತು ಮೊಬೈಲ್ ರೂಪಗಳನ್ನು ಅನಾವರಣಗೊಳಿಸುವುದರ ಮೂಲಕ ಬೆಂಗಳೂರು ಮುದ್ರಣಾಲಯವು ಇಂದು ಅಂತರ್ಜಾಲ ಪ್ರಪಂಚಕ್ಕೆ ದಾಳಿಯಿಟ್ಟಿದೆ.

ವಿಶ್ವದಾದ್ಯಂತ ಇರುವ ಆನ್ ಲೈನ್ ಸಮುದಾಯವನ್ನು ಗುರಿಯಾಗಿಟ್ಟುಕೊಂಡಿರುವ ಬೆಂಗಳೂರು ಮುದ್ರಣಾಲಯದ ಈ–ಕ್ಯಾಲೆಂಡರ್ಸ್ ಬಳಕೆದಾರರು ತಮ್ಮ ಡೆಸ್ಕ್‌ಟಾಪ್ ಅಥವಾ ಮೊಬೈಲ್‌ಗಳಲ್ಲಿ ಪಂಚಾಂಗವನ್ನು ಬಳಸಲು ಅವಕಾಶ ಮಾಡಿಕೊಟ್ಟಿದೆ. ಇದು ವಿಂಡೋಸ್, (XP, 7) ಮ್ಯಾಕ್ ಮತ್ತು ಲೈನಕ್ಸ್‌ಗಳಲ್ಲಿ ಲಭ್ಯವಿದೆ. ಮುದ್ರಿತ ಕ್ಯಾಲೆಂಡರ್‌ನಲ್ಲಿರುವ ವಿನ್ಯಾಸ ಮತ್ತು ಲೇಔಟ್‌ಗಳನ್ನು ಉಳಿಸಿಕೊಂಡಿರುವ ಈ ಡೆಸ್ಕ್‌ಟಾಪ್‌ನ ಕ್ಯಾಲೆಂಡರ್‌ನಲ್ಲಿ ಹಿಂದೂ ಪಂಚಾಂಗವನ್ನಾಧರಿಸಿದ ತಿಥಿ, ನಕ್ಷತ್ರಗಳು, ಸಾರ್ವಜನಿಕ ರಜಾದಿನಗಳು ಮತ್ತು ಇತರ ಮುಖ್ಯವಾದ ಮಾಹಿತಿಗಳು ವಿಪುಲವಾಗಿದೆ. ಇವು ಮೊಬೈಲ್ / ಆಂಡ್ರಾಯ್ಡ್ ಸಾಧನಗಳಲ್ಲಿ ಲಭ್ಯವಿದ್ದು ಉಚಿತವಾಗಿ ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ ಡೆಸ್ಕ್ ಟಾಪ್ ಮತ್ತು ಮೊಬೈಲ್ ಕ್ಯಾಲೆಂಡರ್‌ಗಳು, ಯಾವುದೇ ಆಧುನಿಕ ಕ್ಯಾಲೆಂಡರ್‌ಗಳಲ್ಲಿ ಲಭ್ಯವಿರುವ ಸೌಲಭ್ಯಗಳು – ಉದಾಹರಣೆಗೆ ಪ್ರಮುಖ ಘಟನೆಗಳು, ರಿಮ್ಯೆಂಡರ್ಸ್, ಅಲರ್ಟ್ಸ್, ಕಾರ್ಯಸೂಚಿ ಪಟ್ಟಿಗಳು ಮುಂತಾದ ವೈಶಿಷ್ಟ್ಯತೆಗಳನ್ನು ಹೊಂದಿದೆ. ಬಳಕೆದಾರರ ಮಧ್ಯಪ್ರವೇಶದ ಅವಶ್ಯಕತೆಯಿಲ್ಲದೆ, ಈ ಕ್ಯಾಲೆಂಡರ್‌ನ ಮಾಹಿತಿಗಳನ್ನು ಕಾಲಕಾಲಕ್ಕೆ ನವೀಕರಿಸಲಾಗುತ್ತದೆ. ಈ ವಿಷಯದಲ್ಲಿ ಗ್ರಿಗೇರಿಯನ್, ಹಿಂದೂ, ಮುಸ್ಲಿಂ, ಜೈನ್ ಮತ್ತು ಕ್ರಿಸ್ಟಿಯನ್ ಪಂಚಾಂಗಗಳನ್ನು ಆರೋಗ್ಯಪೂರ್ಣವಾಗಿ ಸಮೀಕರಿಸುವಲ್ಲಿ ಬೆಂಗಳೂರು ಮುದ್ರಣಾಲಯಕ್ಕೆ ಅಪಾರ ಅನುಭವವಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ಮುದ್ರಣಾಲಯದ ವ್ಯವಸ್ಥಾಪಕ ನಿರ್ದೇಶಕ, ಶ್ರೀ ಹೆಚ್.ಆರ್. ಅನಂತ್ ಅವರು "2006ರಲ್ಲಿ ಪ್ರಕಟಿಸಿದ, ನಮ್ಮ ಮುಂಚಿನ ಇಂಗ್ಲಿಷ್ ಈ–ಕ್ಯಾಲೆಂಡರ್‌ಗೆ ವಿಶ್ವದಾದ್ಯಂತ ಸುಮಾರು 2 ಲಕ್ಷದಷ್ಟು ಡೌನ್‌ಲೋಡ್ ಆಗಿ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ" ಎಂದು ಹೇಳಿದರು. ಹೊಸ ಈ–ಕ್ಯಾಲೆಂಡರ್ ಬಗ್ಗೆ ತಿಳಿಸುತ್ತಾ, "ತರುಣರು–ಹಿರಿಯರು ಎಂಬ ವಯೋಭೇದವಿಲ್ಲದೆ ಸಮಸ್ತರಿಗೂ ದಿನನಿತ್ಯದ ಸಾಂಪ್ರದಾಯಿಕ ಮಹತ್ವವನ್ನು ನಮ್ಮ ಪಂಚಾಂಗಗಳ ಮೂಲಕ ಮನದಟ್ಟು ಮಾಡಿಕೊಡುವುದು ನಮ್ಮ ಉದ್ದೇಶ" ಎಂದು ಶ್ರೀ ಅನಂತ್ ಅವರು ಹೇಳಿದರು.

ಬೆಂಗಳೂರು ಮುದ್ರಣಾಲಯವು ತನ್ನ ಪರಿಷ್ಕೃತ ಅಂತರ್ಜಾಲ ಹಾಗೂ ಫೇಸ್ ಬುಕ್ ಸಾನ್ನಿಧ್ಯವನ್ನೂ ಅನಾವರಣಗೊಳಿಸಿತು. ಈ ಹೊಸ ಆವೃತ್ತಿಯು “ಎಲ್ಲರಿಗೂ–ಯಾವ ಸಮಯದಲ್ಲಾದರೂ–ಎಲ್ಲಿಂದಲಾದರೂ” ಲಭ್ಯವಿದೆ. ಸಾಮಾಜಿಕ ತಾಣದಲ್ಲಿ ತಮ್ಮ ಸಾನ್ನಿಧ್ಯದ ಪಾತ್ರವನ್ನು ವಿವರಿಸುತ್ತ, “ವಿಶ್ವದಾದ್ಯಂತ ನಿರ್ದಿಷ್ಟ ವರ್ಗವನ್ನು ತಲುಪಲು ಮತ್ತು ಗ್ರಾಹಕರಿಗೆ ಸೂಕ್ತವಾದುದನ್ನು ನೀಡಲು ನಮ್ಮ ಫೇಸ್ ಬುಕ್ ಅತ್ಯುತ್ತಮ ಸಾಧನವಾಗಿದೆ” ಎಂದು ಶ್ರೀ ಅನಂತ್ ಅವರು ಹೇಳಿದರು.

ಬೆಂಗಳೂರು ಮುದ್ರಣಾಲಯದ ಈ–ಕ್ಯಾಲೆಂಡರ್‌ನ್ನು http://www.bangalorepress.com ಅಂತರ್ಜಾಲದ ಮೂಲಕ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಥವಾ ನಮ್ಮನ್ನು info@bangalorepress.com ನಲ್ಲಿ ಸಂಪರ್ಕಿಸಬಹುದು.

ಮಾಧ್ಯಮ ಸಂಪರ್ಕ :
**ಹೆಚ್.ಆರ್. ಅನಂತ್**
ದಿ ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿ.,
ಬೆಂಗಳೂರು ಮುದ್ರಣಾಲಯ
ನಂ. 88, ಮೈಸೂರು ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018.
ದೂರವಾಣಿ : 26709638, 26709027